**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 306 ಗ್ರಾಪಂಅ 2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 14-05-2014

**ಇವರಿಂದ:**

ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
**ಬೆಂಗಳೂರು.**

**ಇವರಿಗೆ:**

ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಮಾನ್ಯರೆ,

**ವಿಷಯ:** ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಕನಿಷ್ಟ ವೇತನ ಮತ್ತು ತುಟ್ಟಿಭತ್ಯೆ ಪಾವತಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಾಇ 152 ಎಲ್‌ಡಬ್ಲೂಎ 2008 ದಿ:21-02-2011.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 29 ಗ್ರಾಪಂಸಿ 2011 (ಭಾಗ) ದಿ: 12-07-2011.
3. ಕಾರ್ಮಿಕ ಆಯುಕ್ತರ, ಪತ್ರ ಸಂಖ್ಯೆ: ಕವೇಕಾ-2/ಸಿಆರ್-18/2014-15 ದಿ:06-05-2014.
4. ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘ, ಬೆಂಗಳೂರು ಇವರ ಮನವಿ ದಿ:29-03-2014.

****

ಉಲ್ಲೇಖ (1) ರ ಸರ್ಕಾರದ ಅಧಿಸೂಚನೆಯಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗದವರಿಗೆ ಕನಿಷ್ಟ ವೇತನವನ್ನು ನಿಗದಿಪಡಿಸಲಾಗಿರುತ್ತದೆ. ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ವೇತನ ಪಾವತಿಸಲು ಗ್ರಾಮ ಪಂಚಾಯತಿಗಳ ಪ್ರತ್ಯೇಕವಾಗಿ ಬ್ಯಾಂಕ್ ಖಾತೆ ತೆರೆದು ವೇತನವನ್ನು ಜಮಾ ಮಾಡಲು ನಿರ್ದೇಶನ ನೀಡಲಾಗಿದೆ. ಉಲ್ಲೇಖ (3) ಕಾರ್ಮಿಕ ಆಯುಕ್ತರ ಪತ್ರದಲ್ಲಿ 2014-15 ನೇ ಸಾಲಿಗೆ ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಠ ವೇತನದ ಜೊತೆಗೆ ತುಟ್ಟಿ ಭತ್ಯೆ ಪಾವತಿಸುವ ಬಗ್ಗೆ ತಿಳಿಸಿರುತ್ತಾರೆ.

ಉಲ್ಲೇಖ (4) ರ ಮನವಿಯಲ್ಲಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದವರು ಗ್ರಾಮ ಪಂಚಾಯತಿ ನೌಕರರಿಗೆ ಕಾರ್ಮಿಕ ಇಲಾಖೆಯ ಅಧಿಸೂಚನೆ ಪ್ರಕಾರ ಕನಿಷ್ಟ ವೇತನ ಮತ್ತು ತುಟ್ಟಿಭತ್ಯೆ ಹಾಗೂ ವೇತನಕ್ಕಾಗಿ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆದು ಅನುದಾನ ಪಾವತಿಸಲು, ನೌಕರರ ವೇತನಕ್ಕೆ ಕಡಿಮೆಯಾದ ಹಣವನ್ನು ತೆರಿಗೆ ವಸೂಲಾತಿಯಿಂದ ನೌಕರರ ಖಾತೆಗಳ ಜಮಾ ಮಾಡಲು ನಿರ್ದೇಶನ ನೀಡುವಂತೆ ಕೋರಿರುತ್ತಾರೆ.

ಆದುದರಿಂದ ದಿನಾಂಕ:12-07-2011 ರ ಮೇಲ್ಕಾಣಿಸಿದ ಸುತ್ತೋಲೆಯಲ್ಲಿ ಈಗಾಗಲೇ ಸೂಚಿಸಿದಂತೆ **ಗ್ರಾಮ ಪಂಚಾಯತಿ ನೌಕರರಿಗೆ ವೇತನಕ್ಕಾಗಿ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆದು ವೇತನ ಪಾವತಿಸಲು, 2014-15 ನೇ ಸಾಲಿನಲ್ಲಿ ಕನಿಷ್ಟ ವೇತನದ ಜೊತೆಗೆ ತುಟ್ಟಿ ಭತ್ಯೆ ಪಾವತಿಸಲು, ನೌಕರರ ವೇತನಕ್ಕೆ ಕಡಿಮೆಯಾದ ಹಣವನ್ನು ತೆರಿಗೆ ವಸೂಲಾತಿಯಿಂದ ನೌಕರರ ಖಾತೆಗಳ ಜಮಾ ಮಾಡಲು ಕ್ರಮ ವಹಿಸಲು ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ** ನೀಡುವಂತೆ ತಮ್ಮನ್ನು ಕೋರಿದೆ.

ಮುಂದುವರೆದು, ಸರ್ಕಾರವು ಆಗಿಂದಾಗ್ಗೆ ಗ್ರಾಮ ಪಂಚಾಯತಿ ಸಿಬ್ಬಂದಿಗೆ ನಿಗದಿಪಡಿಸುವ ವೇತನ ಸೌಲಭ್ಯವನ್ನು ಗ್ರಾಮ ಪಂಚಾಯತಿಗಳು ಅನುಷ್ಠಾನಗೊಳಿಸಬಹುದು. **ಈ ಬಾಬ್ತಿನ ವಾರ್ಷಿಕ ವೆಚ್ಚ ಗ್ರಾಮ ಪಂಚಾಯತಿಯ ಒಟ್ಟಾರೆ ಆದಾಯದ ಶೇ 40 ರಷ್ಟರ ಮಿತಿಯೊಳಗಿರಬೇಕು. ಅನುದಾನದ ಲಭ್ಯತೆಗೆ ಅನುಗುಣವಾಗಿ ಮಾತ್ರ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ಸಹ ಸೂಚಿಸಲು ಕೋರಿದೆ.**

ತಮ್ಮ ವಿಶ್ವಾಸಿ,

(ಕೆ. ಯಾಲಕ್ಕಿಗೌಡ) 14/5/14
ನಿರ್ದೇಶಕರು ಹಾಗೂ
ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.